**ದಿನಾಂಕಃ 01-08-2025** **OS NO.70/2020(ಪಿ.ಡಬ್ಲು.4)**

**ಇಂದು ದಿನಾಂಕಃ 01-08-2025 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರವಾಗಿ ಶ್ರೀ SBK ವಕೀಲರಿಂದಃ-**

ನಾವು ಒಟ್ಟು 4 ಜನ ಸಹೋದರರು. ಅವರ ಹೆಸರು ಮಲ್ಲಿಕಾರ್ಜುನ, ರಾಜುಕುಮಾರ ಮತ್ತು ಕಮಲಾಕರ. ಪ್ರಾಸಾ-2 ನನ್ನ ಸಹೋದರ ಎಂದರೆ ಸರಿ. ನಮ್ಮ ಗ್ರಾಮದಲ್ಲಿ ಮಸ್ತಾನ ಸಾಬ ಎಂಬ ಬಹಳಷ್ಟು ಜನ ಇದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರಿಗೆ ಬೇರೆ ಬೇರೆ ಅಡ್ಡ ಹೆಸರು ಇದೆ ಎಂದು ನುಡಿಯುತ್ತಾರೆ. ನಾನು ಸಾಮಾನ್ಯವಾಗಿ ಸಣ್ಣ ಪುಟ್ಟ ಪಂಚಾಯಿತಿಯಲ್ಲಿ ಸಾಕ್ಷಿ ಹೇಳುತ್ತೇನೆ ಎಂದರೆ ಸರಿ. ಸಾಮಾನ್ಯವಾಗಿ ಯಾರಾದರೂ ತಮ್ಮ ಆಸ್ತಿ ಮಾರಾಟ ಮಾಡಿದಾಗ ಛಾಪಾ ಕಾಗದದ ಮೇಲೆ ಬರೆಸಿಕೊಳ್ಳುತ್ತಾರೆ ಎಂದರೆ ಸರಿ. ಈ ಪ್ರಕರಣದಲ್ಲಿ ರೂ. 20/- ಛಾಪಾ ಕಾಗದದಲ್ಲಿ ದಾವಾ ಆಸ್ತಿ ಖರೀದಿ ಆಗಿದೆ ಎಂದು ಬರೆಯಲಾಗಿದೆ ಎಂದರೆ ಸರಿ. ಸಾಮಾನ್ಯವಾಗಿ ಛಾಪಾ ಕಾಗದವನ್ನು ವರ್ಗಾವಣೆಗಾಗಿ ಪಂಚಾಯಿತಿಗೆ ನೀಡಿರುತ್ತಾರೆ ಎಂದರೆ ಸರಿ. ಛಾಪಾ

ಕಾಗದದಂತೆ ವರ್ಗಾವಣೆ ಮಾಡಿಕೊಡಿ ಎಂದು ಅರ್ಜಿಯನ್ನು ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿದೆ. ವಾದಿ ತಮ್ಮ ವಾದ ಪತ್ರದಲ್ಲಿ ನಾನು ಅನಕ್ಷರಸ್ಥನಾದ ಕಾರಣ ವರ್ಗಾವಣೆ ಮಾಡಲು ಹೋಗಿಲ್ಲ ಎಂದು ಬರೆದಿದ್ದಾರೆ ಎಂದು ಸೂಚಿಸಿದಾಗ ಸಾಕ್ಷಿ ಅದು ಸುಳ್ಳು ಇರುತ್ತದೆ ಎಂದು ನುಡಿಯುತ್ತಾರೆ.

ಪ್ರತಿವಾದಿಯರು ನಮ್ಮ ಊರಿನಲ್ಲಿ ಇಲ್ಲ ಮತ್ತು ಅವರು ನನಗೆ ಪರಿಚಯವಿಲ್ಲ. ಪ್ರತಿವಾದಿಯರ ಅಜ್ಜನ ಹೆಸರ ಮೋದಿನಸಾಬ ಎಂದರೆ ಸರಿ. 1994 ರಿಂದ 2011 ರವರೆಗೆ ದಾವಾ ಮನೆ ಪಂಚಾಯಿತಿ ದಾಖಲೆಗಳಲ್ಲಿ ಮೋದಿನಸಾಬರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. 2013 ರ ನಂತರ ದಾಖಲೆಗಳಲ್ಲಿ ಮೋದಿನಸಾಬ ಬದಲು ಮಸ್ತಾನಸಾಬ ತಂದೆ ಮೋದಿನಸಾಬ ಎಂದು ಸೇರಿಸಿದ್ದಾರೆ ಎಂದರೆ ಸರಿ. ಈಗಲೂ ಸಹ ದಾವಾ ಆಸ್ತಿ 1ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಮೋದಿನಸಾಬರವರು ದಾವಾ ಮನೆ ತಮ್ಮ ಹೆಸರಿಗೆ ತಪ್ಪಿನಿಂದ ಆಗಿದೆ ಮತ್ತು ಅದು 1ನೇ ಪ್ರತಿವಾದಿಗೆ ಸೇರಿದ್ದು ಎಂದು ದಾಖಲೆಯನ್ನು ಸಹ ಬರೆದು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

2007 ರಲ್ಲಿ ದಾವಾ ಮನೆಯ ಖರೀದಿ ಛಾಪಾ ಕಾಗದದ ಮೇಲೆ ಬರೆಸಿದ್ದಾರೆ. ಸದರಿ ಛಾಪಾ ಕಾಗದ ಈಗ ನೋಡುತ್ತಿರುವ ನಿಪಿ-3 ರ ದಾಖಲೆಯಲ್ಲಿದೆ. ನಿಪಿ-3 ರ ದಾಖಲೆಯಲ್ಲಿ ಖರೀದಿ ಪಡೆದವರು ಸಹಿ ಇಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**